ಖಾನಾಪುರದಲ್ಲಿ ಸೀಮಾ ಪರಿಷತ್ ವಿಚಾರ

೧೨೫೬. ಶ್ರೀ ಬಾಬುರೆಡ್ಡಿ ತಂಗಳ್ (ಬೀಳಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ ಮಾರ್ಚ್ ೭ರಂದು ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿಯು ತನ್ನ ಸೀಮಾ ಪರಿಷತ್ ಸೇರಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಸದರಿ ಪರಿಷತ್ತಿನಲ್ಲಿ ಮಹಾರಾಷ್ಟ್ರದ ಮುಖಂಡರು ಮಾಡಿದ ಭಾಷಣದ ವರದಿಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ?

ಇ) ಈ ಹಿನ್ನೆಲೆಯಲ್ಲಿ ಕರ್ನಾಟಕದಿಂದ ಸರ್ವ ಪಕ್ಷೀಯ ಕನ್ನಡಿಗರ ನಿಯೋಗವೊಂದನ್ನು ದೆಹಲಿಗೆ ಕರೆದೊಯ್ಯುವ ವಿಚಾರ ಸರ್ಕಾರಕ್ಕಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಹೌದು

ಆ) ಹೌದು

ಇ) ಹೌದು ಸರ್ವಪಕ್ಷೀಯ ಶಾಸಕರ ನಿಯೋಗವೊಂದನ್ನು ಪ್ರಧಾನಮಂತ್ರಿಗಳ ಬಳಿ ಆದಷ್ಟು ಜಾಗತೆ ಕೊಂಡೊಯ್ಯಲಾಗುವುದು. ಪ್ರಧಾನ ಮಂತ್ರಿಗಳು ಹಾಗೂ ಗೃಹಮಂತ್ರಿಗಳಿಂದ ಭೇಟಿಯ ದಿನಾಂಕವನ್ನು ಕೇಳಲಾಗಿದೆ. ಸೂಚನೆ ಬಂದ ಕೂಡಲೇ ನಿಯೋಗವನ್ನು ಕಳುಹಿಸಲಾಗುವುದು.

ಸಲ್ವಾರ ಗ್ರಾಮ ಪೋಲೀಸ್ ಸ್ಟೇಷನ್ ವಿಚಾರ

೧೨೦೦. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿತ್ತಾಪುರ ತಾಲ್ಲೂಕು ನಾಲ್ವಾರ ಗ್ರಾಮಕ್ಕೆ ಒಂದು ಆರಕ್ಷಕ ಠಾಣೆ ಅಥವಾ ಹೊರ ಠಾಣೆಯನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ.

ಆ) ಹಾಗಿದ್ದಲ್ಲಿ, ಈ ಗ್ರಾಮ ಒಂದು ಹೊಸ ಠಾಣೆಯನ್ನು ತೆರೆಯಲು ನಾಲ್ಕು ವರ್ಷಗಳಿಂದಲೂ ಒತ್ತಾಯಿಸಿದರೂ ಸರ್ಕಾರವು ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಈ ವಿಷಯ ಸರ್ಕಾರದ ಪೂರ್ವಯೋಜಿತ ಕಾರ್ಯಕ್ರಮದಲ್ಲಿ ಅಳವಡಿಸಿದೆ.

ಆ) ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ಕೂಡಲೇ ಈ ಗ್ರಾಮದಲ್ಲಿ ಹೊರ ಠಾಣೆಯನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯಲ್ಲಿ ಐ.ಪಿ.ಪಿ. ಯೋಜನೆಗಳು

೧೧೯೦. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಐಪಿಪಿ ಯೋಜನೆಯನ್ನು ಉತ್ತರ ಕರ್ನಾಟಕದಲ್ಲಿ ಅಳವಡಿಸಿಕೊಂಡಿದ್ದು ಮತ್ತು ಯಾವಾಗ ಈ ಯೋಜನೆಯನ್ನು ಪೂರ್ತಿಗೊಳಿಸಲು ಅವಧಿ ಬೇಕು ?

ಆ) ಈ ಯೋಜನೆಗೆ ವಿಶ್ವಬ್ಯಾಂಕಿನವರು ಎಷ್ಟು ಹಣವನ್ನು ಒದಗಿಸಿದ್ದಾರೆ ಮತ್ತು ಯಾವ ನಿಬಂಧನೆಗಳನ್ನು ಹಾಕಿದ್ದಾರೆ.